# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಕರ್ನಾಟಕ_ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72 ರಲ್ಲಿ ಕೋಲಾರ ನಗರದಲ್ಲಿರುವ ಎಸ್.ಎನ್.ಆರ್ ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಆದರೆ ಮೂಲಸೌಕರ್ಯ ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ರೋಗಿಗಳಿಗೆ ಉತ್ತಮ ಸೇವೆ ನೀಡಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.ಜಿಲ್ಲೆಯ ಜನರಿಗೆ ಉತ್ತಮ ಆರೋಗ್ಯ ಸೇವೆ ನೀಡಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.ಜಿಲ್ಲೆಯ ಜನರಿಗೆ ಉತ್ತಮ ಆರೋಗ್ಯ ಸೇವೆ ದೊರೆಯಲು ಜಿಲ್ಲೆಯಲ್ಲಿ ಸರಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾಗಿಲ್ಲ. ಇನ್ನ ಎಸ್ಎನ್ಆರ್ ಜಿಲ್ಲಾಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ವರ್ಷಗಳು ಕಳೆದರೂ ಅಗತ್ಯ ಸಿಬ್ಬಂದಿ ಹಾಗೂ ಸೌಕರ್ಯಗಳನ್ನು ಕೊಟ್ಟಿಲ್ಲ.**

**ಇದರಿಂದಾಗಿ ಆಸ್ಪತ್ರೆಗೆ ಬರುವಂತಹ ಬಡ ರೋಗಿಗಳು ತೊಂದರೆ ಎದುರಿಸುವಂತಾಗಿದ್ದು, ಉತ್ತಮ ಚಿಕಿತ್ಸೆಗಾಗಿ ಜಿಲ್ಲೆಯ ಖಾಸಗಿ ಆಸ್ಪತ್ರೆ ಅಥವಾ ಬೆಂಗಳೂರಿಗೆ ಹೋಗುವಂತಾಗಿದೆ. ಹೀಗಾಗಿ ಸರಕಾರ ಕನಿಷ್ಠ ಜಿಲ್ಲಾಸ್ಪತ್ರೆಗಾದರೂ ಸೂಕ್ತ ಸೌಲಭ್ಯಗಳನ್ನು ಒದಗಿಸಲು ಮುಂದಾಗಬೇಕಾಗಿರುವ ಬಗ್ಗೆ**

**ಆರೋಗ್ಯ ಮತ್ತು ಕುಟುಂಬ ಸಚಿವರ ಹೇಳಿಕೆ :**

ಕೋಲಾರ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆಯು 400 ಹಾಸಿಗೆಗಳ ಆಸ್ಪತ್ರೆಯಾಗಿರುತ್ತದೆ. ಈ ಆಸ್ಪತ್ರೆಯ ಆವರಣದಲ್ಲಿ 100 ಹಾಸಿಗೆಗಳ ಪ್ರತ್ಯೇಕ ತಾಯಿ ಮತ್ತು ಮಕ್ಕಳ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು, ಮೆಡಿಕಲ್ ಸೇವೆಗಳು, ಅಪಘಾತ ವಿಭಾಗ, ಜನರಲ್ ಸರ್ಜರಿ, ಮಾನಸಿಕ ಚಿಕಿತ್ಸೆ, ಕಿವಿ, ಮೂಗು, ಗಂಟಲು ಸೇವೆಗಳು, ದಂತ ಆರೋಗ್ಯ, ಕಣ್ಣಿನ ಚಿಕಿತ್ಸೆ, ಕ್ಷ-ಕಿರಣ ರೆಡಿಯಾಲಜಿ ವಿಭಾಗ, ಚರ್ಮರೋಗ, ಆಯುಷ್, ಪಂಚಕರ್ಮ ಸೇವೆಗಳು, ಎ.ಆರ್.ಟಿ, ಒ.ಎಸ್.ಟಿ ಸೇವೆಗಳು, ಡಯಾಲಿಸಿಸ್ ವಿಭಾಗ, ರಕ್ತ ನಿಧಿ ಕೇಂದ್ರ, ಐಸಿಯು ವಿಭಾಗ, ಎಸ್.ಎನ್.ಸಿ.ಯು ವಿಭಾಗ, ಔಷಧ ಉಗ್ರಾಣ, ಉತ್ತಮ ಪ್ರಯೋಗ ಶಾಲೆ ಸೇವೆಗಳು, ಇ-ಆಸ್ಪತ್ರೆ ಅನುಷ್ಠಾನ ಕುರಿತಂತೆ ಕಾರ್ಯಕ್ರಮಗಳು ಚಾಲ್ತಿಯಲ್ಲಿರುತ್ತದೆ. 2024 -ಜನವರಿ ಮಾಹೆಯಲ್ಲಿ ಆಸ್ಪತ್ರೆಗೆ 23352 (ಇಪ್ಪತ್ತು ಮೂರು ಸಾವಿರದ ಮೂರು ನೂರ ಐವತ್ತೆರಡು) ರೋಗಿಗಳು ಸೇವೆಯನ್ನು ಪಡೆದುಕೊಂಡಿರುತ್ತಾರೆ.

ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆಯಲ್ಲಿ 286 ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 110 ಕಾರ್ಯನಿರತವಾಗಿರುತ್ತವೆ ಹಾಗೂ 176 ಖಾಲಿ ಹುದ್ದೆಗಳಿರುತ್ತವೆ. ಖಾಲಿ ಹುದ್ದೆಗಳ ಎದುರು ಎನ್.ಹೆಚ್.ಎಂ ಕಾರ್ಯಕ್ರಮ, ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ, ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುತ್ತಾರೆ.

**ಆಕುಕ 01 ಎಸ್ಎಂಎಂ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**